# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1331 |
| 2 | ಸದಸ್ಯರ ಹೆಸರು | : | ಶ್ರೀ ಎಸ್. ವ್ಹಿ. ಸಂಕನೂರ<br>(ಪದವೀಧರರ ಕ್ಷೇತ್ರ) |
| 3 | ಉತ್ತರಿಸುವ ದಿನಾಂಕ | : | 29-12-2022 |
| 4 | ಉತ್ತರಿಸುವವರು | : | ಮಾನ್ಯ ಮುಖ್ಯಮಂತ್ರಿಗಳು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬಿಬಿಎಂಪಿ ವ್ಯಾಪ್ತಿಯ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ಜಕ್ಕೂರು ವಾರ್ಡ್ ನಂ. 05ರ ವ್ಯಾಪ್ತಿಯಲ್ಲಿ ಆರ್.ಎಂ.ಪಿ-2015 ರಂತೆ ಬಿ.ಡಿ.ಎ.ಯಿಂದ ಗುರುತಿಸಿರುವ 60 ಅಡಿ ಪ್ರಸ್ತಾವಿತ ರಸ್ತೆಯು ಕೋಗಿಲು ಮುಖ್ಯ ರಸ್ತೆಯಿಂದ ಸಂಪಿಗೆಹಳ್ಳಿ ಸೇರುವ ರಸ್ತೆಯಾಗಿದ್ದು, ಈ ರಸ್ತೆ ಮಧ್ಯ ಭಾಗದಲ್ಲಿ ಜಯಸೂರ್ಯನಗರ 1ನೇ ಹಂತದ ಅಂತ್ಯದಿಂದ ಜಯಸೂರ್ಯ ನಗರ 3ನೇ 'ಎ' ಹಂತದ ಪ್ರಾರಂಭದವರೆಗಿನ ರಸ್ತೆಯನ್ನು ಆಕ್ರಮಿಸಿಕೊಂಡು ರಸ್ತೆಯ ಮೇಲೆ ಅನಧಿಕೃತವಾಗಿ ಖಾಸಗಿ ಬಡಾವಣೆಯನ್ನು ನಿರ್ಮಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು. ಬೆಂಗಳೂರು ಉತ್ತರ ತಾಲ್ಲೂಕು, ಯಲಹಂಕ ಹೋಬಳಿ, ಗಸ್ತಿಕೆಂಪನಹಳ್ಳಿ ಗ್ರಾಮದ ಸರ್ವೆ ನಂ. 3 ಮತ್ತು 9ರಲ್ಲಿನ ಒಟ್ಟು 26 ಎಕರೆ 17 ಗುಂಟೆ ವಿಸ್ತೀರ್ಣದಲ್ಲಿ ಮೇ॥ ಆದರ್ಶ ಹೆವೆನ್ ಪ್ರೈ.ಲಿ ಪರವಾಗಿ ಅನುಮೋದಿತ ವಸತಿ ಅಭಿವೃದ್ಧಿ ಯೋಜನಾ ನಕ್ಷೆಯಲ್ಲಿ ಸರ್ಕಾರದಿಂದ ಅನುಮೋದಿತ ಮಹಾಯೋಜನೆ ಆರ್.ಎಂ.ಪಿ-2015ರ ಪ್ರಕಾರ ಪ್ರಸ್ತಾಪಿತ 18.00ಮೀ. ಅಗಲದ ರಸ್ತೆ ಪಂಕ್ತೀಕರಣವನ್ನು ಅಳವಡಿಸಲಾಗಿರುತ್ತದೆ.<br><br>ಬೆಂಗಳೂರು ಉತ್ತರ ತಾಲ್ಲೂಕು, ಯಲಹಂಕ ಹೋಬಳಿ, ಗಸ್ತಿಕೆಂಪನಹಳ್ಳಿ ಗ್ರಾಮದ ಸರ್ವೆ ನಂಬರ್ 4 & 8 ರಲ್ಲಿನ 27ಎ-11 ಗುಂಟೆ ಹಾಗೂ ಗಸ್ತಿಕೆಂಪನಹಳ್ಳಿ ಗ್ರಾಮದ ಸರ್ವೆ ನಂ. 5 ಮತ್ತು ಅಗ್ರಹಾರ ಗ್ರಾಮದ ಸರ್ವೆ ನಂ. 12 ಮತ್ತು 14ರಲ್ಲಿನ ಒಟ್ಟು 9 ಎಕರೆ 39.5 ಗುಂಟೆ ವಿಸ್ತೀರ್ಣದಲ್ಲಿನ ಅನುಮೋದಿತ ವಸತಿ ವಿನ್ಯಾಸದಲ್ಲಿ ಅನುಮೋದಿತ ಮಹಾಯೋಜನೆ ಆರ್.ಎಂ.ಪಿ-2015ರ ಪ್ರಸ್ತಾಪಿತ 18.00 ಮೀ. ಅಗಲದ ರಸ್ತೆ ಪಂಕ್ತೀಕರಣವನ್ನು ಅಳವಡಿಸಲಾಗಿದೆ.<br><br>ಸದರಿ ಪ್ರದೇಶವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಾರ್ಯ ವ್ಯಾಪ್ತಿಯಲ್ಲಿದ್ದು, ರಸ್ತೆ ಒತ್ತುವರಿ, ಮನೆಗಳು, ಅಂಗಡಿ ಮುಂಗಟ್ಟುಗಳ ನಿರ್ಮಾಣ ತಡೆಯಲು ಬಿಬಿಎಂಪಿ ವತಿಯಿಂದ ಅಗತ್ಯ ಕ್ರಮ ವಹಿಸಲಾಗುತ್ತಿದೆ. |
| ಆ) | ಬಂದಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಸಾರ್ವಜನಿಕ ಹಿತದೃಷ್ಟಿಯ ಅತೀ ಮಹತ್ವದ ಈ ಪ್ರಸ್ತಾವಿತ ರಸ್ತೆಯನ್ನು ಸಂರಕ್ಷಿಸಲು ಮತ್ತು ಅಭಿವೃದ್ಧಿಪಡಿಸಲು ಸರ್ಕಾರದ ಮುಂದಿರುವ ಯೋಜನೆಗಳೇನು; | |
| ಇ) | ಈ ರೀತಿ ಅತಿಕ್ರಮಿಸಿಕೊಂಡಲ್ಲಿ ಆರ್.ಎಂ.ಪಿ-2015 ರಂತೆ ಬಿಡಿಎಯಿಂದ ಗುರುತಿಸಿರುವ 60 ಅಡಿ ಪ್ರಸ್ತಾವಿತ ರಸ್ತೆಯು ಕೋಗಿಲು ಮುಖ್ಯ ರಸ್ತೆಯಿಂದ ಸಂಪಿಗೆಹಳ್ಳಿ ಸೇರುವ ರಸ್ತೆಯನ್ನು ಅಭಿವೃದ್ಧಿಪಡಿಸುವ ಸರ್ಕಾರದ ಸಾರ್ವಜನಿಕ ಉದ್ದೇಶ ವಿಫಲವಾಗುವುದಿಲ್ಲವೇ? | |

**ನಅಇ 977 ಎಂಎನ್‌ವೈ 2022**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ